LAC No.5754/2021 C/W
LAC Nos.5738, 5739, 5742, 5743,
5747, 5748,5752 and 5755/2021
P.W.1.

**ಸಾಕ್ಷಿಯನ್ನು ದಿಃ 06.03.2026 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲುಃ ಎ ಜಿ ಪಿ ರವರಿಂದ 1 ಮತ್ತು 2 ನೇ ಎದುರುದಾರರ ಪರವಾಗಿ**

ನಮ್ಮ ಜಮೀನುಗಳನ್ನು ಯಾವ ಉದ್ದೇಶಕ್ಕೆ ಎಷ್ಟು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂಬ ಬಗ್ಗೆ ಮಾಹಿತಿ ಇದೆ. ಭೂಸ್ವಾಧೀನಾಧಿಕಾರಿಗಳು ನಮ್ಮ ಜಮೀನಿಗೆ ಭೇಟಿ ಕೊಟ್ಟು ಚೌಕಾಶಿ ಮಾಡಿಕೊಂಡು ಹೋಗಿರುತ್ತಾರೆಂದರೆ ಸರಿ. ಎದುರುದಾರರು ನಮ್ಮ ಜಮೀನು ಖುಷ್ಕಿ ಜಮೀನುಗಳು ಎಂದು ಪರಿಗಣಿಸಿರುತ್ತಾರೆಂದರೆ ಸರಿಯಲ್ಲ. ಪ್ರತಿ ವರ್ಷ ನಮ್ಮ ಊರಿನ ಜಮೀನುಗಳು ಮಾರಾಟ ಆಗುತ್ತವೆ ಎಂದರೆ ಸರಿ. ಈ ಮೊದಲು ನಮ್ಮ ಜಮೀನಿನ ಅಕ್ಕ ಪಕ್ಕದ ಜಮೀನುಗಳು ಮಾರಾಟ ಆಗಿವೆ ಎಂದರೆ ಸರಿ. ನಮ್ಮ ಜಮೀನು ಅಕ್ಕ ಪಕ್ಕದ ಜಮೀನುಗಳ ಮಾರಾಟದ ಮಾರುಕಟ್ಟೆ ಬೆಲೆ ಪರಿಗಣಿಸಿ ಯೋಗ್ಯ ಪರಿಹಾರ ನೀಡಿರುತ್ತಾರೆಂದರೆ ಕಡಿಮೆ ಪರಿಹಾರ ನೀಡಿದ್ದಾರೆಂದು ಹೇಳುತ್ತೇನೆ. ಸಿದ್ದಾಪೂರ ಹಳ್ಳಿ ಇರುತ್ತದೆ. ಭೂಸ್ವಾಧೀನಪಡಿಸಿಕೊಳ್ಳುವ ಪೂರ್ವದಲ್ಲಿ ನಮ್ಮ ಜಮೀನುಗಳಿಗೆ ಕೇವಲ ಹಳ್ಳಿ ಸಂಪರ್ಕ ಮಾತ್ರ ಇದ್ದವು ಎಂದರೆ ಸರಿಯಲ್ಲ. ಬೇರೆ ಹಳ್ಳಿ ರಸ್ತೆ ಇರಲಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಜಮೀನುಗಳು ಜಮಖಂಡಿ ನಗರಸಭೆ ವ್ಯಾಪ್ತಿಗೆ ಒಳಪಡುವುದಿಲ್ಲವೆಂದರೆ ಸರಿಯಲ್ಲ. ಭೂಸ್ವಾಧೀನಪಡಿಸಿಕೊಳ್ಳುವ ಕಾಲಕ್ಕೆ ಸಿದ್ದಾಪೂರ ಪಂಚಾಯಿತಿಯಾಗಿ ಘೋಷಿಸಿರಲಿಲ್ಲವೆಂದರೆ ಸರಿಯಲ್ಲ. ಅದರಂತೆ ಜಮಖಂಡಿ ನಗರದ ಯಾವುದೇ ವಾರ್ಡನ ಗಡಿ ಪ್ರದೇಶಕ್ಕೂ ಹೊಂದಿಕೊಳ್ಳುವುದಿಲ್ಲವೆಂದರೆ ಸರಿಯಲ್ಲ.

2. ಸಿದ್ದಾಪೂರ ಗ್ರಾಮದ ಜನಸಂಖ್ಯೆ 1000-1500 ಇರುತ್ತದೆ ಎಂದರೆ ಸಾಕ್ಷಿಯು ಸಿದ್ದಾಪೂರ ಈಗ ಪಂಚಾಯಿತಿ ಆಗಿ ಇರುತ್ತದೆ ಎಂದು ಹೇಳುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಉತಾರೆ ಪ್ರಕಾರ ನಮ್ಮ ಜಮೀನು ಸಿದ್ದಾಪೂರ ಗ್ರಾಮ ಎಂದು ಕಾಣಿಸಲಾಗಿದೆ ಎಂದರೆ ಸರಿ. ಸ್ವಾಧೀನಪಡಿಸಿಕೊಂಡ ಯಾವುದೇ ಜಮೀನು ಜಮಖಂಡಿ, ಹುಲ್ಯಾಳ ವ್ಯಾಪ್ತಿಯ ಎನ್.ಎ ಪ್ರದೇಶಗಳಾಗಿ ಒಳಗೊಂಡಿರುವುದಿಲ್ಲ ಅಂದರೆ ಸರಿಯಲ್ಲ. ನಮ್ಮ ಜಮೀನು

ಪಕ್ಕದ ಜಮೀನುಗಳು ಯಾವವು ಬಿನ್ ಶೇತ್ಕಿಯಾಗಿ ಪರಿವರ್ತನೆಯಾಗಿರುವುದಿಲ್ಲ ಅಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿ.ಪಿ.14 ಮತ್ತು 15 ಬಿನಶೇತ್ಕಿ ಆದೇಶಗಳಲ್ಲಿ ಒಳಗೊಂಡಿರುವ ಜಮೀನುಗಳು ನಮ್ಮ ಜಮೀನುಗಳಿಗಿಂತ ಬಹಳ ದೂರದಲ್ಲಿದ್ದು ಅವು ನಮ್ಮ ಪ್ರಕರಣಕ್ಕೆ ಅನ್ವಯಿಸುವುದಿಲ್ಲವೆಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಬಿನ್‌ಶೇತ್ಕಿ ಆದೇಶಗಳಲ್ಲಿ ಒಳಗೊಂಡಿರುವ ಜಮೀನುಗಳು ಈವರೆಗೂ ಯಾವುದೇ ಅಭಿವೃದ್ಧಿ ಹೊಂದಿರುವುದಿಲ್ಲವೆಂದರೆ ಸರಿಯಲ್ಲ. ಬಿನ್ ಶೇತ್ಕಿ ಆದೇಶಗಳಲ್ಲಿ ಒಳಗೊಂಡಿರುವ ಜಮೀನುಗಳು ಪ್ಲಾಟಗಳಾಗಿ ಮಾರ್ಪಟ್ಟು ಮಾರಾಟ ಆಗಿದ್ದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ನಾವು ಹಾಜರುಪಡಿಸಿರುವ ಬಿನಶೇತ್ಕಿ ಆದೇಶಗಳಲ್ಲಿ ಒಳೊಂಡಿರುವ ಜಮೀನುಗಳು ಪ್ಲಾಟುಗಳಾಗಿರುವ ಬಗ್ಗೆ ಪಂಚಾಯಿತಿಯಲ್ಲಿ ದಾಖಲಾಗಿರುವುದಿಲ್ಲವೆಂದರೆ ಸರಿಯಲ್ಲ. ನಿಪಿ-30 ರಲ್ಲಿರುವ ತೀರ್ಪು ನಮ್ಮ ಪ್ರಕರಣಗಳಿಗೆ ಅನ್ವಯಿಸುವುದಿಲ್ಲವೆಂದರೆ ಸರಿಯಲ್ಲ. ನಿಪಿ-17 ರಿಂದ 22 ಇವು ಸಿದ್ದಾಪೂರ ವ್ಯಾಪ್ತಿಯಲ್ಲಿ ಬರುವುದಿಲ್ಲ ಅವು ಬಹಳ ದೂರ ಇರುತ್ತವೆ ಎಂದರೆ ಸರಿಯಲ್ಲ. ಖರೀದಿದಸ್ತುಗಳು ಸಿದ್ದಾಪೂರ ಗ್ರಾಮಕ್ಕೆ ಖುಷ್ಕಿ ಜಮೀನುಗಳಿಗೆ ಸಂಬಂಧಪಡುವುದಿಲ್ಲ ಆ ಕಾರಣ ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಅಂದರೆ ಸರಿಯಲ್ಲ. ಪ್ಲಾಟಿಗೆ ಸಂಬಂಧಿಸಿದ ಖರೀದಿ ದಸ್ತುಗಳು ಸಿದ್ದಾಪೂರ ಗ್ರಾಮಕ್ಕೆ ಸಂಬಂಧಪಡುವುದಿಲ್ಲವೆಂದರೆ ಸರಿಯಲ್ಲ. ಅದು ಆರ್ ಸಿ ಸಿ ಕಟ್ಟಡಕ್ಕೆ ಸಂಬಂಧಪಟ್ಟಿದ್ದು ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲವೆಂದರೆ ಸರಿಯಲ್ಲ.

3. ಸಿದ್ದಾಪೂರ ಮತ್ತು ನಮ್ಮ ಜಮೀನುಗಳ ಸುತ್ತಮುತ್ತ ಯಾವುದೇ ವಸತಿ ಪ್ರದೇಶವಾಗಲೀ, ಔದ್ಯೋಗಿಕ ಪ್ರದೇಶವಾಗಲೀ ಬರುವುದಿಲ್ಲವೆಂದರೆ ಸರಿಯಲ್ಲ. ಸಾಕ್ಷಿ ಶಪಥ ಪತ್ರದ ಖಂಡಿಕೆ-9 ರಿಂದ 15 ರಲ್ಲಿ ಕಾಣಿಸಿರುವ ವಿಚಾರಗಳು ಯಾವುವು ಸಿದ್ದಾಪೂರಕ್ಕೆ ಅನ್ವಯಿಸುವುದಿಲ್ಲವೆಂದರೆ ಸರಿಯಲ್ಲ. ನಮ್ಮೂರಿನಲ್ಲಿ ಯಾವುದೇ ಶಾಲೆ, ಕಾಲೇಜು, ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಮಂಗಲ ಕಾರ್ಯಾಲಯಗಳು ಇರುವುದಿಲ್ಲವೆಂದರೆ ಸರಿಯಲ್ಲ. ನಮ್ಮ ಜಮೀನುಗಳಿಗೆ ಅರ್ಜಿಯಲ್ಲಿ ಕಾಣಿಸಿರುವಷ್ಟು ಮೌಲ್ಯ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಊರು ಸುತ್ತಮುತ್ತ ಯಾವುದೇ ಕಾರ್ಖಾನೆಗಳು ಇರುವುದಿಲ್ಲವೆಂದರೆ

ಸರಿಯಲ್ಲ. ಸಿದ್ದಾಪೂರ ಯಾವುದೇ ರೀತಿ ಅಭಿವೃದ್ದಿ ಹೊಂದದೇ ಇದ್ದು ಬಿನ್‌ಶೇತ್ಕಿ ಕಿಮ್ಮತ್ತು ಹೊಂದಿರುವುದಿಲ್ಲವೆಂದರೆ ಸರಿಯಲ್ಲ. ಸಿದ್ದಾಪೂರದ ಜಮೀನುಗಳು ಖುಷ್ಕಿ ಜಮೀನುಗಳಾಗಿರುವುದರಿಂದ, ನೀರಾವರಿ ಜಮೀನುಗಳು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಸಿಗಲಿ ಎಂದು ನಮ್ಮ ಜಮೀನುಗಳು ಬಿನ್ ಶೇತ್ಕಿ ಮೌಲ್ಯ ಹೊಂದಿರುತ್ತದೆ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ನಮ್ಮ ಜಮೀನು 5-6 ಕಿಮೀ ವ್ಯಾಪ್ತಿಯಲ್ಲಿ ಯಾವುದೇ ಬಿನ್ ಶೇತ್ಕಿ ಆದ ಪ್ರದೇಶಗಳು ಇರುವುದಿಲ್ಲ ಮತ್ತು ಯಾವುದೇ ಅಭಿವೃದ್ದಿ ಹೊಂದಿದ ಪ್ರದೇಶಗಳು ಇರುವುದಿಲ್ಲವೆಂದರೆ ಸರಿಯಲ್ಲ. ನಿಪಿ-13 ರ ಪ್ರಕಾರವು ನಮ್ಮ ಜಮೀನುಗಳು ನಗರಸಭೆ ವ್ಯಾಪ್ತಿಗೆ ಒಳಪಡುವುದಿಲ್ಲವೆಂದರೆ ಸರಿಯಲ್ಲ. ಪರಿಹಾರ ಧನವನ್ನು ತಕರಾರಿಗೆ ಒಳಪಟ್ಟಂತೆ ಪಡೆದಿರುತ್ತೇನೆಂದು ಮತ್ತು ನಿಗದಿತ ಕಾಲಮಿತಿಯೊಳಗೆ ಅರ್ಜಿ ಸಲ್ಲಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಯಾವುದು ತಕರಾರು ಅರ್ಜಿಯಲ್ಲಿ ಹೇಳಿರುವುದಿಲ್ಲವೆಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಸಿಗಲಿ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

4. ನಮ್ಮ ಜಮೀನುಗಳು ಹುಲ್ಯಾಳ ಮತ್ತು ಶಿರೋಳ ಹದ್ದಿಗೆ ಬರುತ್ತವೆ ಅಂದರೆ ಸರಿ. ನಮ್ಮ ಜಮೀನುಗಳು ಕೃಷಿ ಜಮೀನುಗಳು ಅಂದರೆ ಸರಿ. ನಮ್ಮ ಜಮೀನುಗಳ ಅಕ್ಕಪಕ್ಕದ ಜಮೀನುಗಳು ಯಾವುದೂ ಬಿನಶೇತ್ಕಿ ಆಗಿರುವುದಿಲ್ಲ ಅಂದರೆ ಸರಿಯಲ್ಲ. ಬಿನಶೇತ್ಕಿ ಆದ ಜಮೀನು ಸ.ನಂ.ಹೇಳಲು ಬರುವುದಿಲ್ಲ. ನಮ್ಮ ಸುತ್ತಮುತ್ತಲ ಎಲ್ಲ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಾರೆ ಅಂದರೆ ಸರಿ. ಸಾಕ್ಷಿ ಶಪಥಪತ್ರ ಖಂಡಿಕೆ-10 ರಲ್ಲಿ ಹೇಳಿರುವ ಯಾವುದೇ ಜಮೀನುಗಳು ಮತ್ತು ಸ್ವತ್ತುಗಳು ನಮ್ಮ ಜಮೀನಿನ ಸುತ್ತಮುತ್ತ ಇರುವುದಿಲ್ಲ ಅಂದರೆ ಸರಿಯಲ್ಲ. ಸದರಿ ಜಮೀನುಗಳು ನಮ್ಮ ಜಮೀನಿನ ಸುತ್ತಮುತ್ತ ಇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

5. ಸಿದ್ದಾಪೂರ, ಹುಲ್ಯಾಳ ಮತ್ತು ಶಿರೋಳ ಅಕ್ಕಪಕ್ಕದ ಊರುಗಳು ಅಲ್ಲ ಅಂದರೆ ಸರಿ. ಜಮಖಂಡಿಯಿಂದ ಸಿದ್ದಾಪೂರ ಗ್ರಾಮ 8-10 ಕಿಮೀ ಆಗುತ್ತದೆ ಅಂದರೆ ಸರಿಯಲ್ಲ. ಸಿದ್ದಾಪೂರ ಗ್ರಾಮಕ್ಕೆ ಸಂಬಂಧಪಟ್ಟ ಬಿನಶೇತ್ಕಿ ಆದೇಶಗಳು ಮತ್ತು ಖರಿದಿ ಪತ್ರಗಳು ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಅಂದರೆ ಸರಿಯಲ್ಲ. ಶಪಥಪತ್ರದ ಖಂಡಿಕೆ-9 ರಿಂದ 15 ರಲ್ಲಿ ಕಾಣಿಸಿದ ಸಂಗತಿಗಳು ಸುಳ್ಳು ಇರುತ್ತವೆ ಅಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಪ್ರತಿವರ್ಷ ಸಾಕಷ್ಟು ಜಮೀನುಗಳು ಮಾರಾಟ ಆಗುತ್ತವೆ ಅಂದರೆ ಸರಿ. ನಾನು ಹಾಜರುಪಡಿಸಿರುವ ಪ್ರಮಾಣಪತ್ರಗಳು ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಅಂದರೆ ಸರಿಯಲ್ಲ. ನಿ.ಪಿ.17 ರಿಂದ 22 ರಡಿಯಲ್ಲಿ ಕಾಣಿಸಿರುವ ಸಂಸ್ಥೆಗಳು ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಅಂದರೆ ಸರಿಯಲ್ಲ. ಅವುಗಳು ನಮ್ಮ ಜಮೀನಿನಿಂದ ಬಹಳ ದೂರ ಇವೆ ಅಂರದೆ ಸರಿಯಲ್ಲ. ನಮ್ಮ ಜಮೀನುಗಳು ಕೃಷಿ ಜಮೀನುಗಳಾಗಿದ್ದು, ಅವುಗಳನ್ನು ಬಿನಶೇತ್ಕಿಯಾಗಿ ಪರಿವರ್ತಿಸಲು ಯಾವುದೇ ಗುಣಮಟ್ಟ ಇರುವುದಿಲ್ಲ ಅಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಸಿಗಲಿ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

6. ಭೂಸ್ವಾಧೀನ ಜಮೀನುಗಳು ಜಮಖಂಡಿಯಿಂದ 5-6 ಕಿಮೀ ಅಂತರದಲ್ಲಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ಜಮೀನುಗಳಲ್ಲಿ ಸೂರ್ಯಕಾಂತಿ ಮತ್ತು ಮುಂತಾದ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ಜಮೀನುಗಳಲ್ಲಿ ಕಬ್ಬು ಬೆಳೆದು ಕಾರ್ಖಾನೆಗೆ ಸರಬರಾಜು ಮಾಡಿದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಅಂದರೆ ಸರಿಯಲ್ಲ. ನಿ.ಪಿ.17 ರಿಂದ 22 ನ್ನು ಕೇಸಿಗಾಗಿ ಸಂಸ್ಥೆಯ ಅಧಿಕಾರಿಗಳ ಮೇಲೆ ಪ್ರಭಾವ ಬೀರಿ ಸುಳ್ಳು ಸೃಷ್ಟಿಮಾಡಲಾಗಿದೆ ಅಂದರೆ ಸರಿಯಲ್ಲ. ನಿ.ಪಿ.30 ರಲ್ಲಿ ಒಳಗೊಂಡಿರುವ ಜಮೀನುಗಳು ನಮ್ಮ ಜಮೀನಿನಿಂದ ದೂರ ಇರುವುದರಿಂದ ಈ ಪ್ರಕರಣಕ್ಕೆ ಅನ್ವಯಿಸುವುದಿಲ್ಲ ಅಂದರೆ ಸರಿಯಲ್ಲ. ಗಲಗಲಿ ಮತ್ತು ಇನಾಮಹಂಚಿನಾಳ ಪುನರ್ವಸತಿ ಕೇಂದ್ರಗಳಲ್ಲಿ ಶೇ.80 ರಷ್ಟು ಕಟ್ಟಡಗಳು ನಿರ್ಮಾಣ ಆಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಹೇಳಿರುವಂತೆ ಯಾವುದೇ ಕಾರ್ಖಾನೆಗಳಾಗಲೀ, ವಾಣಿಜ್ಯ ಕಟ್ಟಡಗಳಾಗಲೀ,

ಶಾಲಾ-ಕಾಲೇಜುಗಳಾಗಲೀ ನಮ್ಮ ಜಮೀನು ಸುತ್ತಮುತ್ತ ಇರುವುದಿಲ್ಲ ಅಂದರೆ ಸರಿಯಲ್ಲ. ನಿ.ಪಿ.17 ರಿಂದ 22 ರಲ್ಲಿರುವ ಸಂಸ್ಥೆಗಳು ಭೂಸ್ವಾಧೀನವಾದ ಬಳಿಕ ಅಸ್ತಿತ್ವಕ್ಕೆ ಬಂದ ಸಂಸ್ಥೆಗಳು ಅಂದರೆ ಸರಿಯಲ್ಲ. ಸದರಿ ಸಂಸ್ಥೆಗಳು ನಮ್ಮ ಜಮೀನುಗಳಿಂದ ಬಹಳ ದೂರ ಇವೆ ಅಂದರೆ ಸರಿಯಲ್ಲ. ನಮ್ಮ ಜಮೀನುಗಳು ಬಿನಶೇತ್ಕಿ ಆಗುವ ಗುಣಮಟ್ಟ ಹೊಂದಿವೆ ಎಂದು ಎದುರುದಾರರಿಗೆ ಲಿಖಿತ ರೂಪದಲ್ಲಿ ಯಾವುದೇ ಅರ್ಜಿ ಸಲ್ಲಿಸಿಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

7. ನಾನು ಹಾಜರುಪಡಿಸಿರುವ ಮ್ಯಾಪ-ನಿ.ಪಿ.13 ರಲ್ಲಿ ಸ್ವಾಧೀನಪಡಿಸಿಕೊಂಡ ನನ್ನ ಜಮೀನನ್ನು ನಮೂದು ಮಾಡಿಲ್ಲ ಅಂದರೆ ಸರಿಯಲ್ಲ. ನಿ.ಪಿ.22 ರಿಂದ 29 ರ ಕ್ರಯಪತ್ರಗಳು ಗಲಗಲಿ ಪುನರ್ವಸತಿ ಕೇಂದ್ರದ ಖುಲ್ಲಾಜಾಗೆಯ ಕ್ರಯಪತ್ರಗಳು ಅಂದರೆ ಸರಿಯಲ್ಲ. ನಿ.ಪಿ.22 ರಿಂದ 29 ರ ಕ್ರಯಪತ್ರಗಳಿಗೆ ಸಂಬಂಧಪಟ್ಟ ಜಮೀನುಗಳು ನಮ್ಮ ಭೂಸ್ವಾಧೀನಪಡಿಸಿಕೊಂಡ ಜಮೀನಿನಿಂದ 5 ಕಿಮೀ ದೂರದಲ್ಲಿವೆ ಅಂದರೆ ಸರಿಯಲ್ಲ. ನಿ.ಪಿ.16 ರಿಂದ 22 ರ ದಾಖಲೆಗಳಲ್ಲಿ ತೋರಿಸಿರುವ ಶಾಲೆ ಹಾಗೂ ಕಾರ್ಖಾನೆಗಳು ನಮ್ಮ ಸ್ವಾಧೀನಪಡಿಸಿಕೊಂಡ ಜಮೀನಿನಿಂದ ಸುಮಾರು ದೂರದಲ್ಲಿವೆ ಅಂದರೆ ಸರಿಯಲ್ಲ. ನಿ.ಪಿ.16 ರಿಂದ 22 ರಲ್ಲಿ ತೋರಿಸಿರುವ ಸಂಸ್ಥೆಗಳು ಹಾಗೂ ಕಾರ್ಖಾನೆಗಳಿಗೂ ಮತ್ತು ನಮ್ಮ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೂ ಇರುವ ಅಂತರದ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ.

**ಪಾಟೀ ಸವಾಲುಃ ಶ್ರೀಮತಿ ಎಸ್ ಸಿ ಬಿ ವಕೀಲರಿಂದ ಎಂ ಎಂ ಎಚ್ ವಕೀಲರ ಪರವಾಗಿ 3 ನೇ ಎದುರುದಾರರ ಪರವಾಗಿ**

8. ಭೂಸ್ವಾಧೀನಪಡಿಸಿಕೊಳ್ಳುವ ಮೊದಲು ನಮಗೆ ನೋಟಿಸ ಕೊಟ್ಟಿರುತ್ತಾರೆ. ನಮ್ಮ ಜಮೀನು ಫಲವತ್ತತೆ ಇರುವ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ.

ಇನ್ನುಳಿದಂತೆ 1 ಮತ್ತು 2 ನೇ ಎದುರುದಾರರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ

**ಮರುವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

MAHAMED IMTHIYAZ AHAMED
Digitally signed by MAHAMED IMTHIYAZ AHAMED
Date: 2026.03.10 11:39:03 +0530

1 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ನ್ಯಾಯಾಧೀಶರು
ಬಾಗಲಕೋಟ, ಉಪಸ್ಥಿತಿ ಜಮಖಂಡಿ